ಬೇಕೆಂದು ಮತ್ತು ಯಾವ ಯಾವ ತಾಲ್ಲೂಕುಗಳನ್ನು ಮತ್ತು ಯಾವ ಯಾವ ಜಿಲ್ಲೆಗಳನ್ನು ಪುನರ್-ವಿಂಗಡಿಸಿದ್ದಾರೆಂದು ಈ ಮನೆಯ ಸದಸ್ಯರ ಗಮನಕ್ಕೆ ತರಬೇಕೆಂದು ಕೋರುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಉಂಡೇಕಾರ್‌ರವರ ಪರದಿ ಸರ್ಕಾರದ ಪರಿಶೀಲನೆಗೆ ಬರಬೇಕು ಅದನ್ನು ಪರಿಶೀಲಿಸಿದ ನಂತರ ಅದರ ಬಗ್ಗೆ ಸರ್ಕಾರದ ಧೋರಣೆ ಏನು ಏನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಆ ಕೆಲಸವನ್ನು ಬೇಗ ಮಾಡತಕ್ಕಂತಹ ಆಶ್ವಾಸನೆಯನ್ನು ಸನ್ಮಾನ್ಯ ಸದಸ್ಯರಿಗೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

XII ಮೈಸೂರು ನಗರ ಪಾಲಿಕೆಯ ಪೌರ ಕಾರ್ಮಿಕರಿಗೆ ಸಾರ್ವತ್ರಿಕ ರಜಾ ದಿನಗಳನ್ನು ಕೊಡದಿರುವುದು

ಶ್ರೀ ವೇದಾಂತ ಹೆಬ್ಬಿಗೆ.—ಮೈಸೂರು ನಗರ ಪಾಲಿಕೆಯಲ್ಲಿ ಸುಮಾರು ೮೦೦ ಮಂದಿ ಪೌರ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಇದುವರೆವಿಗೆ ಇವರುಗಳಿಗೆ ಸಾರ್ವತ್ರಿಕ ರಜಾ ದಿನಗಳು ದೊರಕುತ್ತಿಲ್ಲ ಮತ್ತು ಈ ದಿವಸಗಳಲ್ಲಿ ಅವರುಗಳು ಕೆಲಸ ಮಾಡಿದರೂ ಕಾನೂನಿನಂತೆ ಕೊಡಬೇಕಾದ ವೇತನ ಭತ್ಯ ದೊರಕುತ್ತಿಲ್ಲ, ಆದರೆ ಆಸ್ಪತ್ರೆಗಳಲ್ಲಿ ಕೆಲಸ ಮಾಡುವ ನೌಕರರಿಗೆ ಮಾತ್ರ ಸಾರ್ವತ್ರಿಕ ರಜಾ ದಿನಗಳಲ್ಲಿ ಕೆಲಸ ಮಾಡಿದರೂ ಅವರಿಗೆ ಕಾನೂನಿನಂತೆ ಅಧಿಕ ಭತ್ಯ ನೀಡುತ್ತಿರುವುದು ನ್ಯಾಯ ಯುತವಾದ ನೀತಿಯಲ್ಲ. ಮೈಸೂರು ನಗರದ ನಿರ್ಮಲೀಕರಣದ ಜವಾಬ್ದಾರಿಯನ್ನು ಹೊತ್ತಿರುವ ಈ ಪೌರ ಕಾರ್ಮಿಕರಿಗೆ ಸಾರ್ವತ್ರಿಕ ರಜಾ ದಿನಗಳನ್ನು ಘೋಷಿಸಲು ಸರಕಾರವು ಕ್ರಮ ಕೈಗೊಳ್ಳಬೇಕು. ಇಲ್ಲವೇ ಕೆಲಸ ಮಾಡುವ ಆ ದಿನಗಳಿಗೆ ಅಧಿಕ ಭತ್ಯ ನೀಡಲು ಆದೇಶ ನೀಡಬೇಕು ಎಂದು ಒತ್ತಾಯಿಸಿ ಸಂಬಂಧಪಟ್ಟ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೆ, ಈ ನಗರ ಸಭೆಗಳಲ್ಲಿ ಮತ್ತು ಪುರ ಸಭೆಗಳಲ್ಲಿ ನಗರದ ನಿರ್ಮಲೀಕರಣದಲ್ಲಿ ನಿರತರಾಗಿರತಕ್ಕಂತಹವರಿಗೆ ಭಾನುವಾರ ಅಥವಾ ಶನಿವಾರ ರಜಾ ಇಲ್ಲ ಎಂಬುದು ಸನ್ಮಾನ್ಯ ಸದಸ್ಯರಿಗೆ ಗೊತ್ತಿದೆ. ಆದರೆ ಅವರಿಗೆ ಬೇರೆ ದಿನ ರಜಾ ಕೊಡತಕ್ಕಂತಹ ವ್ಯವಸ್ಥೆ ಇದೆ. ಇದು ಪ್ರತಿನಿತ್ಯ ನಡೆಯುತ್ತಿರಬೇಕಾದ ಕೆಲಸವಾದ್ದರಿಂದ ಅವರಿಗೆ ರಜೆ ಸಿಕ್ಕುತ್ತಿಲ್ಲ ನಿಜ. ಮತ್ತು ಅವರಿಗೆ ಆ ವಾರದಲ್ಲಿ ಬೇರೆ ದಿನ ರಜೆ ಕೊಡತಕ್ಕಂತಹ ಪದ್ಧತಿ ಇದೆ ಎಂಬುದನ್ನು ಸನ್ಮಾನ್ಯ ಸದಸ್ಯರು ತಿಳಿದುಕೊಂಡಿದ್ದಾರೆ ಎಂದು ನಾನು ಭಾವಿಸುತ್ತೇನೆ. ಏನೋ ವ್ಯತ್ಯಾಸ ಇದೆ, ತಾರತಮ್ಯ ಇದೆ ಎಂದು ಹೇಳಿದ್ದಾರೆ, ನಾನು ಈ ಒಂದು ಉತ್ತರವನ್ನು ಕೊಟ್ಟರೂ ಅವರಿಗೆ ಸಮಾಧಾನವಾಗದೇ ಇರಬಹುದು. ನಾನು ಅದನ್ನು ಮತ್ತೆ ಪರಿಶೀಲಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶಾಸನ ರಚನಾ-ಕಾರ್ಯ ಕಲಾಪಗಳು

THE KARNATAKA IMPROVEMENT BOARDS (AMETDMENT) BILL, 1986.

Motion to Consider

SRI A. LAKSHMISAGAR (Minister for Law, Parliamentary Affairs, Food and Civil Supplies).—Sir, I beg to move :

> "That the Karnataka Improvement Boards (Amendment Bill, 1986 be taken into consideration."

The question was proposed

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೆ, ಇದರಲ್ಲಿ ವಿಶೇಷವಾದದ್ದು ಏನೂ ಇಲ್ಲ. ಮುಖ್ಯವಾದ ವಿಚಾರ ಇದರಲ್ಲಿ ಪ್ರಸ್ತಾಪವಾಗಿರುವುದು, ಬಾಗಲಕೋಟೆ, ಟೌನ್ ಡೆವೆಲಪ್‌ಮೆಂಟ್ ಅಥಾರಿಟಿ ಬಗ್ಗೆ ಒಂದು ಹೈಲೆವೆಲ್ ಕಮಿಟಿ ಎಂದು ಇದೆ. ಆ ಹೈಲೆವೆಲ್ ಕಮಿಟಿಯಲ್ಲಿ ನಗರಾಭಿವೃದ್ಧಿ ಸಚಿವರಿಗೆ ಅವಕಾಶ ಇಲ್ಲ. ಪದೇ ಪದೇ ಅಲ್ಲಿ ನಡೆಯತಕ್ಕಂತಹ ಕೆಲಸವನ್ನು ಪರಿಶೀಲನೆ

ಮಾಡಿ, ಮುಂದಿನ ಕೆಲಸದ ಗೊತ್ತುಪಳಿಯನ್ನು ಸೂಚಿಸುವುದಕ್ಕೋಸ್ಕರ ಒಂದು ಹೈಲೆವೆಲ್ ಸಮಿತಿ ಎಂದು ಮಾಡಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಆ ಬೈಲೆವೆಲ್ ಸಮಿತಿಯ ಅಧ್ಯಕ್ಷರು. ಮತ್ತು ಇತರೇ ಸದಸ್ಯರು ಇದ್ದಾರೆ. ಆದರೆ ನಗರಾಭಿವೃದ್ಧಿ ಸಚಿವರು ಆ ಸಮಿತಿಯ ಸದಸ್ಯರಲ್ಲ. ನಗರಾಭಿವೃದ್ಧಿ ಮಂತ್ರಿಗಳೂ ಆ ಹೈಲೆವೆಲ್ ಸಮಿತಿಯ ಸದಸ್ಯರಾಗಬೇಕು ಎನ್ನುವ ಒಂದು ತಿದ್ದುಪಡಿಯನ್ನು ತಂದಿದ್ದೇನೆ. ಇದಕ್ಕೆ ಮಾನ್ಯ ಸದಸ್ಯರು ತಮ್ಮ ಒಪ್ಪಿಗೆಯನ್ನು ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ಇದರಲ್ಲಿ ಅಂತಹ ಒಂದು ಮಹತ್ತರವಾದ ವಿಷಯ ಏನೂ ಇಲ್ಲ. ಒಂದೇ ಒಂದು ಮಾತ್ರ ವಿವರಣೆಯನ್ನು ಕೇಳಬೇಕು. ಬಾಗಲಕೋಟೆ ಟೌನ್ ಡೆವೆಲಪ್‌ಮೆಂಟ್ ಆಥಾರಿಟಿ ಬಗ್ಗೆ ಒಂದು ಹೈಲೆವೆಲ್ ಸಮಿತಿ ಇದ್ದು, ಆ ಸಮಿತಿಯ ಅಧ್ಯಕ್ಷರು ಮುಖ್ಯಮಂತ್ರಿಗಳು ಇದ್ದಾರೆ ಎಂಬುದಾಗಿ ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ, ಆ ಹೈಲೆವೆಲ್ ಸಮಿತಿ ಇದುವರೆವಿಗೂ ಎಷ್ಟು ದಿವಸ ಸೇರಿದೆ ? ಆ ಎಲ್ಲಾ ಸಭೆಗಳಲ್ಲೂ ಮುಖ್ಯ ಮಂತ್ರಿಗಳು ಭಾಗವಹಿಸಿದ್ದಾರೆಯೇ ? ಎನ್ನುವುದನ್ನು ಸ್ವಲ್ಪ ಮಟ್ಟಿಗೆ ನಮಗೆ ತಿಳುವಳಿಕೆ ಬೇಕಾಗಿದೆ. ಏಕೆಂದರೆ, ಈಗ ಅವರು ಹೇಳುವುದು ನಿಜ ಇರಬಹುದು. ನಗರಾಭಿವೃದ್ಧಿ ಮಂತ್ರಿಗಳು ಆ ಸಮಿತಿಯ ಸದಸ್ಯರಾಗಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಆ ಒಂದು ಸಭೆಯಲ್ಲಿ ಅಟೆಂಡ್ ಮಾಡುತ್ತಿಲ್ಲ, ಆದ್ದರಿಂದ ನಗರಾಭಿವೃದ್ಧಿ ಸಚಿವರು ಆ ಸಮಿತಿಯ ಸದಸ್ಯರಾಗಿರಬೇಕು ಎಂದು ಮಾಡಿದ್ದೀರೋ ? ಇದರಿಂದ ಆಗತಕ್ಕಂತಹ ಅನುಕೂಲ ಏನು ? ಅನಾನುಕೂಲತೆ ಏನು ಎಂಬುದನ್ನು ಸ್ವಲ್ಪ ಹೇಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಇಬ್ಬರೂ ಇರುವುದರಿಂದ ಅನಾನುಕೂಲವಾಗುತ್ತದೆ ಎಂಬುದು ಒಂದು ದೃಷ್ಟಿ. ಮತ್ತೆ ಎಲ್ಲಾ ಸಭೆಗಳಲ್ಲೂ ಮುಖ್ಯಮಂತ್ರಿಗಳು ಹಾಜರಾಗುವುದಕ್ಕೆ ಸಾಧ್ಯವಾಗದೇ ಇರಬಹುದು ಎನ್ನುವ ಕಾರಣಕ್ಕೋಸ್ಕರ ನಗರಾಭಿವೃದ್ಧಿ ಮಂತ್ರಿಗಳು ಅಲ್ಲಿ ಹಾಜರಿರುವುದರಿಂದ ಒಳ್ಳೆಯದು ಎನ್ನುವ ಕಾರಣಕ್ಕಾಗಿ ಈ ಒಂದು ತಿದ್ದುಪಡಿಯನ್ನು ತರಲಾಗಿದೆ. ಬಹಳ ಸೂಕ್ಷ್ಮವಾಗಿ ಮತ್ತು ಸ್ಥೂಲವಾಗಿ ಅಲ್ಲಿ ನಡೆಯತ್ತಿರತಕ್ಕಂತಹ ಕೆಲಸ ಕಾರ್ಯಗಳ ಬಗ್ಗೆ ಒಂದು ವರದಿಯನ್ನು ಕೊಡುವುದಕ್ಕೆ ಇಚ್ಛಪಡುತ್ತೇನೆ. ೯,೫೦೦ ಎಕರೆಯನ್ನು ಈಗ ಹಾಲಿ ಇರತಕ್ಕಂತಹ ಬಾಗಲಕೋಟೆ ಪಟ್ಟಣದ ಪಶ್ಚಿಮದ ಭಾಗದಲ್ಲಿ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಲ್ಯಾಂಡ್ ಅಕ್ವಿಜಿಷನ್ ಆಕ್ಟ್ ಸೆಕ್ಷನ್ ೬ (೧)ರ ಪ್ರಕಾರ ಕ್ರಮ ತೆಗೆದುಕೊಳ್ಳುತ್ತಿದೆ. ಆಮೇಲೆ, entrustment of studies to the I.I.M., I.S.E,S. and M/s. Chrles Correa and Company. The town starts submerging if the water level crosses 168^0,. Structures whieh sub-merge with the water level rising at every 1^0' till it reaches the maximum level of 1731' have been identified, Line cstimate of the cost of shifting is about Rs. 91 crores and has been sent to Government in December, 1985,

Agreements have been entered into by theBagalkot Town Dcvelopent Authority with Indian Insviture of Management, Institute for Social and Economic Change and M/s. Charles Correa I.I.M. hss taken up in June 1986, study regarding housing modalities. I.S.E,C. has started in Juns 1986, study of slums in the Town. M/s. Charles Correa has to preprre plans for the new Town. The firm has been furnished with the information regarding availability of resources like men and material. Shri Charles Correa has visited the area ear-marked for the new Town on 10th and 11th July 1986 and conducted spot inspection. As and when the water level rises what area submerges that area would be shifted depending upon the submersion, These are some of the important points with regard to the development and action to be taken in view of the submersion of the town as and when the Almatti Dam is completed.

ಶ್ರೀ ಎಂ.ಎಸ್. ಕೃಷ್ಣನ್.—ಅವರು ಹೇಳಿದ್ದುದು ಒಳ್ಳೆಯದಾಯಿತು. ನಾನು ಒಂದೆರಡು ವಿಷಯಗಳನ್ನು ಮಾತ್ರ ಹೇಳಬಯಸುತ್ತೇನೆ. ನಾವು ಶಾಸಕರೆಲ್ಲ ಅಲ್ಲಿಗೆ ಹೋಗಿದ್ದಾಗ ಅಲ್ಲಿನ ಜನ ಎರಡು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಪ್ರಾದೇಶಿಕ ಯೋಜನೆಗಳು ಹೊಸ ಬಾಗಲಕೋಟೆಗೆ ಬರುತ್ತವೆ, ವಿಳಕ್ಕದ್ದು ಮುಳುಗಡೆಯಾಗುತ್ತದೆಂದು ಹೇಳಿದರು. ಆ ಜಾಗ ವಿಸ್ತಾರವಾಗಿದೆ ಚೆನ್ನಾಗಿದೆ ಎಂಬುದರಲ್ಲಿ ಭಿನ್ನಾಭಿಪ್ರಾಯ ಇಲ್ಲ. ಆ ಯೋಜನೆ ಯಾವಾಗ ಬರುತ್ತದೆ, ಎಷ್ಟು ಬೇಗ ಬರುತ್ತದೆಂದು ಅಲ್ಲಿನ ಜನ ಪ್ರಶ್ನೆ ಹಾಕುತ್ತಿದ್ದಾರೆ. ಆದು ಬಾರದೆ ಹೊಂದರೆಯಾಗುವ ಹಾಗೆ ಮಾಡಬೇಡಿ ಎಂದು ಹೇಳುತ್ತೇನೆ. ಇಲ್ಲಿ ಒಂದು ಜಿಜ್ಞಾಸೆ ಏನೆಂದರೆ, ಮುಳುಗಡೆಯಾದಾಗ ಬೇರೆ ಕಡೆಗೆ ಜನರನ್ನು ಕಳುಹಿಸುತ್ತೇವೆಂದು ಹೇಳಿದ್ದೀರಿ. ಬೇರೆ ಕಡೆ ಕಳುಹಿಸುವುದಕ್ಕೆ ಮನೆ ಕಟ್ಟಿರಬೇಕು, ಎಲ್ಲಾ ವ್ಯವಸ್ಥೆಗಳನ್ನು ಮಾಡಿರಬೇಕು, ಅದನ್ನು ಮಾಡದೆ ಕಳುಹಿಸಿದರೆ ತೊಂದರೆಯಾಗುತ್ತದೆ. ಆ ಜನರು ಪರಿಹಾರದ ಬಗ್ಗೆಯೂ ಬಹಳ ಆತಂಕದಿಂದ ಏನು ಪರಿಹಾರ ಸಿಗುತ್ತದೆಂದು ಕೇಳಿದರು. ಬಾಗಲಕೋಟೆಯ ಅರ್ಧ ಭಾಗ ಮುಳುಗಡೆಯಾಗಿ ಹೋಗುವ ಹಾಗೆ ಕಾಣುತ್ತದೆ. ನಾವು ಇಷ್ಟೊಂದು ವ್ಯಾಪಾರ ವಹಿವಾಟು ಮಾಡುತ್ತಿದ್ದೇವೆ, ನಾವು ಅಲ್ಲಿಗೆ ಹೋದಮೇಲೆ ವ್ಯಾಪಾರ ಆಗುತ್ತದೆಯೋ ಇಲ್ಲವೋ ಎಂಬ ಪ್ರಶ್ನೆಯನ್ನು ಇಟ್ಟಿದ್ದಾರೆ. ಆದ್ದರಿಂದ, ಇದರ ಬಗ್ಗೆ ಒಂದು ಸರ್ವೆಯನ್ನು ಕಂಡಕ್ಟ್ ಮಾಡಿ ಸ್ಪಷ್ಟವಾದ ತೀರ್ಮಾನ ಮಾಡುತ್ತೀರಾ ? ನಾನು ಹೇಳಿದ್ದನ್ನು ಜಾರಿಗೆ ತರುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಎಲ್ಲಾ ವಿಷಯಗಳನ್ನು ಸರ್ಕಾರದವತಿ ಗಮನದಲ್ಲಿಟ್ಟುಕೊಂಡಿದ್ದೇವೆ. ಯಾರಿಗೂ ತೊಂದರೆಯಾಗದ ರೀತಿಯಲ್ಲಿ ಈ ಒಂದು ಮುಳುಗಡೆ ಪ್ರದೇಶದಲ್ಲಿರತಕ್ಕ ಜನರಿಗೆ ಮನೆಗಳ ವ್ಯವಸ್ಥೆ ಮಾಡಿಕೊಡತಕ್ಕದ್ದರ ಬಗ್ಗೆ ಪರಿಹಾರದ ಬಗ್ಗೆ ಸರ್ಕಾರ ಗಮನ ಹರಿಸಿದೆ. The first phase of shifting will take place when water level reaches 1711 feet—that is 1991. The estimated cost is Rs. Thirty Five crores ಹಾಗೆಯೇ ಹಂತಹಂತವಾಗಿ ಏರಿ ಎತ್ತರವಾದಷ್ಟು ಮುಳುಗಡೆ ಪ್ರದೇಶ ಕೂಡ ಜಾಸ್ತಿಯಾಗುತ್ತಾ ಹೋಗುತ್ತದೆ. ಆ ಹಂತಕ್ಕೆ ಸರಿಯಾಗಿ ಕಾರ್ಯಕ್ರಮವನ್ನು ಜೋಡಿಸಲಾಗಿದೆ. ಯಾರಿಗೂ ತೊಂದರೆಯಾಗದ ರೀತಿಯಲ್ಲಿ ಕೆಲಸ ಮಾಡಬೇಕು, ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಐ.ಎಸ್.ಕೆ. ಮತ್ತು ಐ.ಎಂ.ಎಲ್. ನವರಿಗೆ ಸ್ಟಡಿ ಮಾಡಿ ರಿಪೋರ್ಟ್ ಕೊಡಿ ಎಂದು ಹೇಳಿದ್ದೇವೆ. ಅವರು ಕಾರ್ಯವನ್ನು ಪ್ರಾರಂಭ ಮಾಡಿದ್ದಾರೆ. ಅವರು ಕೊಡತಕ್ಕ ವರದಿಯ ಹಿನ್ನೆಲೆಯಲ್ಲಿ ಸರ್ಕಾರ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತದೆ. ಇದರ ಬಗ್ಗೆ ಯಾರಿಗೂ ಸಂಶಯ ಬೇಡ. ಲ್ಯಾಂಡ್ ಅಕ್ವೈರ್ ಮಾಡಿಕೊಂಡ ಮೇಲೆ ಪರಿಹಾರವನ್ನು ಕೊಡಬೇಕಾಗಿರುವುದರಿಂದ ಪರಿಹಾರದ ಬಗ್ಗೆಯೂ ಯೋಚನೆ ಮಾಡುವುದು ಬೇಡ. ಅದನ್ನು ನಾವು ಕೊಟ್ಟೇ ಕೊಡುತ್ತೇವೆಂಬ ಮಾತನ್ನು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಅಧ್ಯಕ್ಷರು.—ಪರ್ಯಾಲೋಚನಾ ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತಿದ್ದೇನೆ. ಪ್ರಸ್ತಾವ ಏನೆಂದರೆ:

''ರಾಷ್ಟ್ರೀಯ ಸಮಿತಿಯ ಕರ್ನಾಟಕ ಅಭಿವೃದ್ಧಿ ಮಂಡಳಿಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨ ಮತ್ತು ೩ :

ಅಧ್ಯಕ್ಷರು.—'ಖಂಡ ೨ ಮತ್ತು ೩ ವಿಧೇಯಕದ ಅಂಗವಾಗಿರುತ್ತವೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ಮತ್ತು ೩ ವಿಧೇಯಕಕ್ಕೆ ಸೇರಿಲ್ಪಟ್ಟಿವು)

ಮೊದಲನೆಯ ಖಂಡ, ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ :

'ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳನ್ನು ವಿಧೇಯಕದ ಭಾಗವಾಗಿರುತ್ತವೆ'

ಪ್ರಸ್ತಾಪವನ್ನು ಅಂಗೀಕರಿಸಲಾಯಿತು

(ಮೊದಲನೆಯ ಖಂಡ, ಹೆಸರು, ಮತ್ತು ಅವತರಣಿಕೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಅಂಗೀಕಾರ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್.—೧೯೮೬ನೇ ಇಸವಿಯ ಕರ್ನಾಟಕ ಅಭಿವೃದ್ಧಿ ಮಂಡಳಿಗಳ(ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ :

'೧೯೮೬ನೇ ಇಸವಿಯ ಕರ್ನಾಟಕ ಅಭಿವೃದ್ಧಿ ಮಂಡಳಿಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.'

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

೧೯೮೬ನೇ ಇಸವಿಯ ಕರ್ನಾಟಕ ಅಕ್ಷಿಪಟಲಗಳ ಜೋಡಣೆ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಹಾಗೂ ಅಬ್ಕಾರಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ೧೯೮೬ನೇ ಇಸವಿಯ ಕರ್ನಾಟಕ ಅಕ್ಷಿಪಟಲಗಳ ಜೋಡಣೆ (ತಿದ್ದುಪಡಿ) ವಿಧೇಯಕವನ್ನು ಸಭೆಯು ಪರ್ಯಾಲೋಚಿಸಬೇಕಾಗಿ ಕೋರುತ್ತೇನೆ.

ಪ್ರಸ್ತಾವನ್ನು ಮಂಡಿಸಲಾಯಿತು

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಇದು ಬಹಳ ಸರಳವಾದ ತಿದ್ದುಪಡಿ ವಿಧೇಯಕ ಈಗಾಗಲೇ ಸುಗ್ರೀವಾಜ್ಞೆ ಮೂಲಕ ಜಾರಿಯಲ್ಲಿರತಕ್ಕ ಕಾನೂನು ಇದು. ಇದಕ್ಕೆ ಶಾಸ್ತ್ರೀಯವಾದ ಚೌಕಟ್ಟನ್ನು ಮಾತ್ರ ಹಾಕಬೇಕಾಗಿದೆ. ಇದು ಮೃತರ ಕಣ್ಣುಗಳನ್ನು ತೆಗೆದು ಅಂಧರಾಗಿರತಕ್ಕ ಜನಗಳಿಗೆ ಜೋಡಿಸತಕ್ಕ ಕ್ರಿಯೆಗೆ ಸಂಬಂಧಪಟ್ಟ ತಿದ್ದುಪಡಿ ವಿಧೇಯಕ. ಇದರ ಮೂಲ ಕಲಂನಲ್ಲಿ ಇದ್ದ ಕೆಲವು ದೋಷಗಳನ್ನು ಸರಿಪಡಿಸತಕ್ಕದ್ದು ಆಗಿದೆ. ಮೊದಲು ಕಣ್ಣನ್ನು ತೆಗೆಯುವಾಗ ಇಬ್ಬರು ಸಾಕ್ಷಿಗಳು ಇರಬೇಕಾಗಿತ್ತು. ಈಗ ಒಬ್ಬರೇ ಸಾಕ್ಷಿ ಸಾಕು ಎಂದು ಮಾಡಿದ್ದೇವೆ. ಸಂಶೋಧನೆಗೆ ಕೂಡ ಆ ಕಣ್ಣನ್ನು ಉಪಯೋಗಿಸಿಕೊಳ್ಳಬಹುದು ಜೋಡಣೆಗೆ ಬೇಕಾದರೂ ಉಪಯೋಗಿಸಿಕೊಳ್ಳ ಬಹುದು ಎಂದು ಮಾಡಿದ್ದೇವೆ. ಈ ಸಂಬಂಧವಾಗಿ ಯಾರಾದರೂ ಮೊಕದ್ದಮೆ ಹೂಡುವುದಾದರೆ ಕಾನೂನಿನಲ್ಲಿ ಅವಕಾಶ ಮಾಡಿಕೊಡಕೂಡದು ಎಂಬುದು ಇದರ ಉದ್ದೇಶವಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಈ ಮಸೂದೆ ನಿಜವಾಗಿ ಸ್ವಾಗರ್ತಾವಾದುದು. ಆದರೆ ಡ್ರಾಫ್ಟಿಂಗ್‌ನಲ್ಲಿ ಮಿಸ್ಟೇಕ್ ಮಾಡಿದ್ದೀರಿ, ಅದನ್ನು ಸರಿ ಮಾಡಿಕೊಳ್ಳಬೇಕೆಂದು ಒಂದು ತಿದ್ದುಪಡಿ ಕಳುಹಿಸಿದ್ದೇನೆ. ಇವರು ಡ್ರಾಫ್ಟ್ ಮಾಡುವಾಗ ಕಿಡ್ನಿಗೆ ಸಂಬಂಧಪಟ್ಟ ವಿಧೇಯಕವನ್ನು ಫಾಲೋ ಮಾಡಬೇಕಾಗಿತ್ತು. ಇದರಲ್ಲಿ ಒಂದು ವಾಕ್ಯವನ್ನು ಮಾತ್ರ ಬಿಟ್ಟಿದ್ದಾರೆ. "Authority for removal of Cornea for grafting from unclaimed bodies. ಅಂತ ಇದೆ. ಅದನ್ನು ಸೇರಿಸಬೇಕಾಗಿತ್ತು.

ಶ್ರೀ ಎ. ಲಕ್ಷ್ಮೀಸಾಗರ್.—ಕಿಡ್ನಿಗೆ ಸಂಬಂಧಪಟ್ಟ ವಿಧೇಯಕ ಮುಂದೆ ಬರುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ.—ಅದನ್ನು ಇದರಲ್ಲಿ ಇನ್‌ಕ್ಲೂಡ್ ಮಾಡಬೇಕಾಗಿತ್ತು ಎಂದು ಹೇಳುತ್ತಿದ್ದೇನೆ. ಆದರಲ್ಲೇನು ಅನುಮಾನ ಇಲ್ಲ. I welcome that bill. We have to add the same Sentence in this bill.
Itreads :